ದಿನಾಂಕಃ 27-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. BSS ಪ್ರತಿನಿಧಿಯವರು

ವಿಚಾರಣಾಧಿಕಾರಿಯನ್ನು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ಹಾಜರುಪಡಿಸಲು ಪ್ರಯತ್ನ ಪಟ್ಟ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ವಿಚಾರಣಾಧಿಕಾರಿಯನ್ನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಆಗುವುದಿಲ್ಲ ಎಂದು ಯಾವುದೇ ಪತ್ರ ಕೊಟ್ಟಿಲ್ಲ ಎಂದರೆ ಸರಿ. ದಾಖಲಾತಿಗಳ ಆಧಾರದ ಮೇಲೆ ನಾನು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿ. ದಿನಾಂಕಃ11-11-1998 ರಲ್ಲಿ ನಿಎಂ-3 ನೀಡಿದ ಆರೋಪಣಾ ಪಟ್ಟಿ ಎಂದರೆ ಸರಿ. ನಿಎಂ-11 ದಿನಾಂಕಃ06-06-2006 ರಂದು ವಿಚಾರಣಾಧಿಕಾರಿ ನೀಡಿದ ನಿರ್ಣಯ ಎಂದರೆ ಸರಿ. ದಿನಾಂಕಃ10-02-2005 ರಂದು ನಿಎಂ-10 ಆದೇಶ ಪುಟದಲ್ಲಿ ಪ್ರಾಥಮಿಕ ವಿಚಾರಣೆ ಮಾಡಿದ್ದೇವೆಂದು ತಿಳಿಸಿದ್ದಾರೆ ಎಂದರೆ ಸರಿ. ನಿಎಂ-6 ಪ್ರಾಥಮಿಕ ವಿಚಾರಣೆ ನಡವಳಿ ಎಂದರೆ ಸರಿ. ನಿಎಂ-7 ದಿನಾಂಕಃ15-09-2005 ಡಿಪೋಸಿಷನ್ ಎಂದರೆ ಸರಿ. ನಿಎಂ-10 ಆರ್ಡರ್ ದಿನಾಂಕಃ10-02-2005 ಆದೇಶದಲ್ಲಿ "ಈ ಸಾಕ್ಷಿ ಪಾಟೀ ಸವಾಲು ಮಾಡಲು ಆಪಾದಿತರ ಕೋರಿಕೆ ಮೇರೆಗೆ ಅನುಮತಿ ನೀಡಲಾಗಿದೆ DW-1 ರವರ ಪಾಟೀ ಸವಾಲು ಮಾಡಲಾಗಿದೆ" ಎಂದು ನಮೂದಾಗಿದೆ ಎಂದರೆ ಸರಿ. ದಿನಾಂಕಃ19-12-1997 ನಿಎಂ-2 ವಿಭಾಗೀಯ ಭದ್ರತಾ ಹವಂದಾರ್ ಮತ್ತು ನೀರಿಕ್ಷಕರು ನೀಡಿದ ವರದಿ ಎಂದರೆ ಸರಿ . ನಿಎಂ-2 ರಲ್ಲಿ ಪ್ಯಾರಾ 1 ರಲ್ಲಿ " ನಾನು ಮುಖ್ಯ ಶಿಕ್ಷಕರು, ಹಿಃಪ್ರಾಃಶಾಲೆ ಬೇವಿನಹಳ್ಳಿ , ಮಂಡ್ಯ ತಾಲ್ಲೂಕುಗೆ ಹೋಗಿ ಭೇಟಿ ಮಾಡಿ ಶಾಲಾ ಮುಖ್ಯಸ್ಥರಿಗೆ ಜೆರಾಕ್ಸ ಪ್ರತಿ ವರ್ಗಾವಣೆ ಸಂಖ್ಯೆ 41/91-92 ದಾಖಲಾತಿ ಸಂಖ್ಯೆ 1/76-77 ದ ತೋರಿಸಿ ವಿಚಾರಣೆ ಮಾಡಿದಾಗ ಅವರು ಶಾಲಾ ದಾಖಲಾತಿ ಪುಸ್ತಕಗಳನಸ್ನು ಪರಿಶೀಲಿಸಿದಾಗ ವರ್ಗಾವಣೆ ಪತ್ರವು ಅವರ ಶಾಲೆಯ ದಾಖಲಾತಿ ಪುಸ್ತಕದಲ್ಲಿ ನಮೂದಿಸಿರುತ್ತದೆ ಎಂದು ತಿಳಿಸಿದರು ಹಾಗೂ ಎಸ್ ಆನಂದ್ ತಂದೆ ಕೆ.ಸಿದ್ದಯ್ಯ ಎಂಬುವರು 2 ನೇ ತರಗತಿಯಿಂದ 7 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತಾರೆಂದು ದೃಢೀಕರಣ ಪತ್ರವು ಸಹ ನೀಡಿರುತ್ತಾರೆ. ಈ ವರ್ಗಾವಣೆ

ಪತ್ರವು ನಿಜವಿರುತ್ತದೆ. " ಎಂದು ನಮೂದಿಸಿರುತ್ತಾರೆ ಎಂದರೆ ಸರಿ .

ಕಾಲಾವಕಾಶ ಕೇಳಿರುತ್ತಾರೆ, ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.